**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>**

**<u>ಪೊನ್ನಂಪೇಟೆ</u>**

**ಸಿ.ಸಿ. ನಂ. 729/2024 ಪ್ರಾ.ಸಾ – 14**

**ಚಾ.ಸಾ – 7**

**<u>ದಿನಾಂಕಃ 11.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | | |
|---|---|---|
| ಸಾಕ್ಷಿಯ ಹೆಸರು | : | ಶಿವರಾಜು |
| ತಂದೆಯ ಹೆಸರು | : | ನೀಲಮೇಘನ್ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಚಾಲಕರು |
| ವಾಸ ಸ್ಥಳ | : | ಪೊನ್ನಂಪೇಟೆ |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–</u>**

ದಿ. 04.11.2023 ರಂದು ಪೊಲೀಸರ ಕೋರಿಕೆಯಂತೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಅಶ್ಲೀಲ ವಿಡಿಯೋ facebook ನಲ್ಲಿ ಹಾಕಿರುವ ಬಗ್ಗೆ ಮಹಜರ್ ಮಾಡಿಕೊಂಡರು. ಸಾಕ್ಷಿಯು ನಿ ಪಿ 30 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿ ಪಿ 30(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–</u>**

ಮಹಜರ್ ವೇಳೆ ಪೊಲೀಸರು ಆರೋಪಿ ವಶದಲ್ಲಿದ್ದ OPPO mobile phone ಅನ್ನು ವಶಕ್ಕೆ ಪಡೆದು ಮಹಜರ್ ಅನ್ನು ಬೆ. 10.45 ರಿಂದ 11.45 ತನಕ ಮಾಡಿದರು ಎಂದರೆ ಸರಿ. ಸಾಕ್ಷಿಯು ಮು ಮಾ 2 ಅನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ 8 ರವರು ಮಹಜರ್ ವೇಳೆ ಇದ್ದರು ಎಂದರೆ ಸರಿ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್ ವಕೀಲರಿಂದಃ</u>**

ಮಹಜರ್ ನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯಂತೆ ಸಹಿ ಮಾಡಿದೆ ಎಂದರೆ ಸರಿ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮೊಬೈಲ್ ಅನ್ನು ಅಮಾನತುಪಡಿಸಿಕೊಳ್ಳಲಿಲ್ಲ, ಅಮಾನತುಪಡಿಸಿಕೊಂಡಿದ್ದೇವೆ ಎಂದು ಹೇಳಿ ನನ್ನ ಸಹಿ ಪಡೆದುಕೊಂಡರು. ಆರೋಪಿ ಯಾರು ಎಂದು ನನಗೆ ಆದಿನ ಪೊಲೀಸರು ತೋರಿಸಲಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ